# ಬಿಐಇಟಿ ಕಾಲೇಜಿಗೆ 1.86 ಕೋಟಿ ಅನುದಾನ

**ದಾವಣಗೆರೆ:** ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ನ್ಯೂ ಏಜ್ ಇನ್ನೋವೇಶನ್ ನೆಟ್ವರ್ಕ್ ಕೇಂದ್ರ ಸ್ಥಾಪಿಸಲು ನಗರದ ಬಿಐಇಟಿ ಕಾಲೇಜಿಗೆ 1.86 ಕೋಟಿ ರೂ., ಮಂಜೂರು ಮಾಡಿದೆ. ಇಲಾಖೆಯು ಸ್ಟಾರ್ಟಪ್ 22–27ರ ಅಡಿ 2.0 ಕೇಂದ್ರ ಸ್ಥಾಪಿಸಲು ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯವನ್ನು ಆಯ್ಕೆ ಮಾಡಿ, 1.86 ಕೋಟಿ ಅನುದಾನ ನೀಡಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಬಿ ಅರವಿಂದ್ ತಿಳಿಸಿದ್ದಾರೆ.